ಉಪಯೋಗಿಸಿ ಬೇಕಾದರೆ ಐದು ಸಾವಿರ ಉಂಗುರಕ್ಕಂತ ಕೊಡಿಸೋಣ ಅಂತ ಆಸೆ ಬೇರೆ ತೋರಿಸಿ ಮದುವೆ ನಡೆದುಬಿಡುವ ಹಾಗೆ ನೋಡಿಕೊಂಡರು.

ಮದುವೆ ಶಾಸ್ತ್ರ ಎಲ್ಲ ಮುಗಿದ ಮೇಲೆ ಶ್ರೀನಿವಾಸರಾಯರು ವೀವರ್ಸ್ ಲೈನಿನ ಹತ್ತಿರದಲ್ಲೇ, ಕೃಷ್ಣಮೂರ್ತಿಪುರಂನಲ್ಲಿ ಬಾಡಿಗೆಗೆ ಮನೆ ಹಿಡಿದಿದ್ದು ಅದು ಅವರಿಗೆ ದೂರ ಆದರೂ ಅಹಲ್ಯಬಾಯಿ ಕೆಲಸ ಮಾಡ್ತಾ ಇದ್ದ ಪ್ರೈವೇಟ್ ಹೈಯರ್‌ಪ್ರೈಮರಿ ಸ್ಕೂಲಿನ ಹತ್ತಿರವೇ ಇದ್ದದ್ದರಿಂದ ಒಳ್ಳೆಯದೇ ಆಗಿತ್ತು. ಆದರೆ ಸಂಸಾರ ಹೂಡಿದ ಎರಡನೆಯ ದಿನವೇ ರಾಯರಿಗೆ ಬೆಳ್ಳಂಬೆಳಿಗ್ಗೆನೇ ಜ್ಞಾನೋದಯ ಬೇರೆ ರೀತಿಯೇ ಆಗಿತ್ತು! ಆಗಿನ ಕಾಲದ ರೂಢಿಯ ತರಹ ಬೆಳಿಗ್ಗೆಯೇ ಹಾಲಿನವನು ನಸುಕಿನ ಆರು ಗಂಟೆಗೇ ಅಚ್ಚೇರು ಹಾಲು ಹಾಕಲು ಬಂದು 'ಅಮ್ಮೋರೇ ಹಾಲೂ' ಅಂತ ಕೂಗು ಹಾಕಿದ. ಹೊಸದಾಗಿ ಸಂಸಾರ ಹೂಡಿದ್ದ ರಾಯರು ಬೆಳ್ಳಂಬೆಳಗಿನ ನಿದ್ದೆಯಲ್ಲೇ ಇದ್ದು ಸವಿಸವಿಗನಸು ಕಾಣುತ್ತಾ ಮಲಗಿದ್ದರೆ 'ಅಪ್ಪೋರೇ ಹಾಲೂ' ಅಂತ ಮತ್ತೆ ಹಾಲಿನವನ ಕೂಗು ಕೇಳಿಸಿತು.

ರಾಯರು ಬಹಳ ಹೋಪ್‌ಫುಲ್ ಆಗಿ ಹಿಂದಿನ ಕಾಲದ ಸಿನಿಮಾಗಳಲ್ಲಿ ಆಗುತ್ತಲ್ಲ ಹಾಗೆ ತಮ್ಮ ಪತ್ನಿ ಮೊದಲೇ ಎದ್ದು ಹಾಲು ಹಾಕಿಸಿಕೊಂಡು, ನೀರು ಕುದಿಸಿ, ಕಾಫಿ ಡಿಕಾಕ್ಷನ್ ಹಾಕಿ, ಸ್ಟ್ರಾಂಗ್ ಆಗಿ ಕಾಫಿ ಬೆರೆಸಿ ಹಬೆಯಾಡುತ್ತಿದ್ದ ಘಮಘಮ ಕಾಫೀನ ತಾವು ಮಲಗಿರುವಲ್ಲೇ ತಂದು ತುಂಬ ಮೆಲು ದನಿಯಲ್ಲಿ 'ರ್‍ರೀ, ಕಾಫೀ, ಕಾಫೀ ತೊಗೋತೀರಾ' ಅನ್ನೋದು, ತಾವು ಸಿನಿಮಾ ಹೀರೊ ತರಹ ಇನ್ನು ನಿದ್ದೆಯಲ್ಲೇ ಇದ್ದಂತೆ ನಟಿಸಿ ಆಕೆ ಹತ್ತಿರ ಬಂದಂತೆ ಕೈಹಿಡಕೊಂಡು... ಅಂತೆಲ್ಲ ಕನಸು ಕಾಣುತ್ತಾ ಇದ್ದರೆ ಅಹಲ್ಯಬಾಯಿಯ ಕಠೋರ ದನಿ 'ಹಾಲಿನೋನು ಕೂಗಿದ್ದು ಕೇಳಲಿಲ್ಲವಾ? ಇನ್ನು ಹಾಗೇ ಬಿದ್ದುಕೊಂಡಿದ್ದೀಯಾ? ಬೇಗ ಎದ್ದು ಕಾಫಿ ಮಾಡಿ ತಂದು ಕೊಡು, ತಲೆ ನೋವು ಬೇರೆ' ಎಂದಿತು. ಶ್ರೀನಿವಾಸರಾಯರಿಗೆ ತಮ್ಮ ಹೆಂಡತಿ ಹೋಗಲೀ, ಯಾವುದೇ ಹೆಂಗಸು ಈ ರೀತಿ ಮಾತನಾಡಬಹುದು ಅನ್ನುವ ಕಲ್ಪನೆಯೂ ಇಲ್ಲದೆ ಇದ್ದು, ಶಾಕ್ ಆಗಿ, ಬೆರಗಣ್ಣು ಬಿಟ್ಟುಕೊಂಡು ನೋಡುತ್ತಾ ಇದ್ದರೆ ಮತ್ತೆ ಅಹಲ್ಯಬಾಯಿ 'ಅದೇನು ಮಂಕು ಕವಿದ ಹಾಗೆ ನೋಡ್ತಾ ಇದೀಯಾ! ಏಳು ಬೇಗ! ಕಾಫಿ ಕುಡೀದೇ ನನಗೆ ಎಚ್ಚರಾನೇ ಆಗಲ್ಲ ಹಾಳಾದ್ದು! ಬೆಳಗಾಗೆದ್ದು ತಲೆನೋವು ಬೇರೆ! ಅದೇನು ಗೊರಕೆ ಹೊಡೀತೀಯೋ! ನನಗೆ ಒಂದು ನಿಮಿಷಾನೂ ರಾತ್ರಿ ನಿದ್ದೆ ಇಲ್ಲ' ಎಂದು ಆಕಡೆಗೆ ಮಗ್ಗುಲಾಗಿ ಅತ್ತಲಿಂದಲೇ 'ಕಾಫಿ ಮಾಡಿ ಕರಿ, ಅಲ್ಲೀವರೆಗೂ ಹಾಗೇ ಬಿದ್ದುಕೊಂಡಿರ್ತೀನಿ' ಅಂದಳು.

ಅವತ್ತಿನ ದಿವಸ ಶುರುವಾದ ಈ ರುಟೀನು ಶ್ರೀನಿವಾಸರಾಯರ ಕಡೆಕಡೆಯ ದಿನಗಳವರೆಗೂ ನಡದೇ ನಡೆಯಿತು. ಹಾಗೂ ಒಂದು ಸಲ ನೋಡೋಣ ಅಂತ ಶ್ರೀನಿವಾಸರಾಯರು 'ಲೇ, ಇವತ್ತೊಂದು ದಿನ ನೀನೇ ಕಾಫಿ ಮಾಡ್ತೀಯಾ, ಡಿಕಾಕ್ಷನ್ ಹಾಕಿಟ್ಟಿದೀನಿ ರಾತ್ರೀನೇ. ಯಾಕೋ ಜ್ವರ ಬಂದ ಹಾಗಿದೆ, ಮೈಕೈ ನೋವು ಬೇರೆ' ಅಂತ ತಮ್ಮ ರಿಕ್ವೆಸ್ಟ್‌ನ ಡೂಪ್ಲಿಕೇಟ್‌ನಲ್ಲಿ ಮುಂದಿಟ್ಟರು. ಹತ್ತು ನಿಮಿಷ ಆದ ಮೇಲೆ ಅಹಲ್ಯಬಾಯಿ ಎದ್ದು ನಿಧಾನಕ್ಕೆ ಕಾಫಿ ಬೆರೆಸಿ ತಾವು ಮೊದಲು ಕುಡಿದು ನಂತರ ಬರಬರ ನಡೆದು ಬಂದು, ಮಲಗಿದ್ದ ಶ್ರೀನಿವಾಸರಾಯರ ಪಕ್ಕ ಕುಕ್ಕಿ ಇಟ್ಟ ರಭಸಕ್ಕೆ ಅರ್ಧಕ್ಕರ್ಧ ಕಾಫಿ ಹಾರಿ ರಾಯರ ಮುಖಕ್ಕೆಲ್ಲ ಸಿಂಪಡಿಸಿತು. ಅದೇ ಕಡೆ ರಾಯರಿಗೆ ಅವರ ಪತ್ನಿ ಬೆಡ್‌ಕಾಫಿ ತಂದಿಟ್ಟಿದ್ದು!

ಇದೆಲ್ಲದರ ಮಧ್ಯೆ ಇನ್ನೊಂದು ಹೊಸ ಪ್ರಾಬ್ಲಮ್ಮು ರಾಯರ ಮುಂದೆ ಬಂದು ಧುತ್ತೆಂದು